**India Radio: Bangalore**
**National Bulletins In Kannada**
**22.06.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.06.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಇಸ್ರೇಲ್-ಇರಾನ್ ಸಂಘರ್ಷ; ಅಮೆರಿಕಾದಿಂದ ಇರಾನ್ ಪರಮಾಣು ತಾಣಗಳ ಮೇಲೆ ದಾಳಿ

೨. ಕರ್ನಾಟಕದ ಮಾವು ಬೆಳೆಗಾರರಿಗೆ ಪಿಡಿಪಿಎಸ್ ಯೋಜನೆಯಡಿ ಪರಿಹಾರ ಘೋಷಿಸಿದ ಕೇಂದ್ರ ಸರ್ಕಾರ

೩. ಇಂದಿನಿಂದ ಎರಡು ದಿನಗಳ ಕಾಲ ಛತ್ತೀಸ್‌ಗಢ ಪ್ರವಾಸ ಕೈಗೊಳ್ಳಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ

೪. ಆಪರೇಷನ್ ಸಿಂಧು ಅಡಿಯಲ್ಲಿ ಇರಾನ್‌ನಿಂದ ನೇಪಾಳ-ಶ್ರೀಲಂಕಾ ಪ್ರಜೆಗಳನ್ನು ಸ್ಥಳಾಂತರಿಸಿದ ಭಾರತ

೫. ಅಂಡರ್ಸನ್-ಟೆಂಡೂಲ್ಕರ್ ಟ್ರೋಫಿ ಟೆಸ್ಟ್: ಮೊದಲ ಇನಿಂಗ್ಸ್‌ನಲ್ಲಿಂದು ಬ್ಯಾಟಿಂಗ್ ಮುಂದುವರೆಸಲಿರುವ ಇಂಗ್ಲೆಂಡ್, ಕಡಿವಾಣ ಹಾಕುವ ತವಕದಲ್ಲಿ ಭಾರತ

**<><*<><>*><>**

ಇರಾನ್‌ನ ಮೂರು ಪರಮಾಣು ತಾಣಗಳ ಮೇಲೆ ಯಶಸ್ವಿಯಾಗಿ ದಾಳಿ ನಡೆದಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಇರಾನ್‌ನ ಮೂರು ಪ್ರಮುಖ ಪರಮಾಣು ತಾಣಗಳಾದ ಫೋರ್ಡೋ, ನತಾಂಜ್ ಮತ್ತು ಇಸ್ಫಹಾನ್‌ಗಳ ಮೇಲೆ ಅಮೆರಿಕ ಯಶಸ್ವಿ ದಾಳಿಗಳನ್ನು ನಡೆಸಿದೆ ಎಂದು ಘೋಷಿಸಿದ್ದಾರೆ. ಫೋರ್ಡೋ ಪರಮಾಣು ತಾಣವನ್ನು ಕೂಡ ಈ ದಾಳಿಯಲ್ಲಿ ಗುರಿಯಾಗಿಸಿದ್ದು, ಇವು ಅತ್ಯಂತ ಪರಿಣಾಮಕಾರಿಯಾಗಿದ್ದವು ಎಂದು ಮಾಹಿತಿ ನೀಡಿದ್ದಾರೆ. ಎಲ್ಲಾ ಅಮೆರಿಕ ವಿಮಾನಗಳು ಇರಾನ್‌ನ ವಾಯುಪ್ರದೇಶದಿಂದ ಹೊರಬಂದಿವೆ ಎಂದು ಅವರು ತಿಳಿಸಿದ್ದಾರೆ. ಈ ಘೋಷಣೆಯ ಬೆನ್ನಲ್ಲೇ ಇರಾನ್ ವಿರುದ್ಧದ ಸಮರದಲ್ಲಿ ಇಸ್ರೇಲ್‌ನೊಂದಿಗೆ ಅಮೆರಿಕ ಅಧಿಕೃತವಾಗಿ ಸೇರ್ಪಡೆಗೊಂಡಂತಾಗಿದೆ.

**<><*<><>*><>**

ಮಾವು ಬೆಲೆ ಕುಸಿತದಿಂದ ಸಂಕಷ್ಟದಲ್ಲಿರುವ ಮಾವು ಬೆಳೆಗಾರರಿಗೆ ಕೇಂದ್ರ ಸರ್ಕಾರ, 'ಬೆಲೆ ಕೊರತೆ ಪಾವತಿ ಯೋಜನೆ- ಪಿಡಿಪಿಎಸ್' ಯೋಜನೆಯಡಿ ಪರಿಹಾರ ನೀಡುವುದಾಗಿ ಘೋಷಿಸಿದೆ. ಈ ಪರಿಹಾರವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ನೀಡಲಿದೆ. ಈ ಕುರಿತಂತೆ

ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಕರ್ನಾಟಕದಲ್ಲಿ ಮಾವಿನ ಮಾರುಕಟ್ಟೆ ಬೆಲೆಯಿಂದ ಉದ್ಭವಿಸಿರುವ ಪರಿಸ್ಥಿತಿ ಹಿನ್ನೆಲೆ ರೈತರಿಗೆ ಅವರ ಉತ್ಪನ್ನಕ್ಕೆ ನ್ಯಾಯೋಚಿತ ಮೌಲ್ಯ ಸಿಗುವಂತೆ ಮಾಡಲು ಕೇಂದ್ರ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ ಎಂದು  ತಿಳಿಸಿದ್ದಾರೆ.ಈ ಕುರಿತಂತೆ ಕರ್ನಾಟಕ ರಾಜ್ಯ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅವರೊಂದಿಗೆ ಸಮಗ್ರ ಚರ್ಚೆ ನಡೆಸಲಾಗಿದ್ದು, ಸುಮಾರು ೧.೫ ಲಕ್ಷ ಮೆಟ್ರಿಕ್ ಟನ್ ಮಾವಿಗೆ ಟಿಡಿಪಿಎಸ್ ಅಡಿಯಲ್ಲಿ ರೈತರಿಗೆ ಪರಿಹಾರ ನೀಡಲು ಒಪ್ಪಿಗೆ ದೊರೆತಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಮಾಹಿತಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಈ ನಿರ್ಧಾರಕ್ಕೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕೃತಜ್ಞತೆ ಸಲ್ಲಿಸಿದ್ದಾರೆ.  ಕಳೆದ ವಾರ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಕೃಷಿ ಸಚಿವರಿಗೆ ರಾಜ್ಯದ ಮಾವು ಬೆಲೆ ಕುಸಿತ ಹಾಗೂ ಪರಿಹಾರ ಕುರಿತಂತೆ ಆಗ್ರಹಿಸಿ ಪತ್ರ ಬರೆದಿದ್ದರು.

<><*<><>*><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದಿನಿಂದ ಎರಡು ದಿನಗಳ ಕಾಲ ಛತ್ತೀಸ್‌ಗಢ ಪ್ರವಾಸ ಕೈಗೊಳ್ಳಲಿದ್ದಾರೆ. ಭೇಟಿಯ ಭಾಗವಾಗಿ ಅವರು, ರಾಜ್ಯ ರಾಜಧಾನಿ ರಾಯಪುರ ಮತ್ತು ನಾರಾಯಣಪುರ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾಯಪುರದಲ್ಲಿಂದು ಅವರು ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ ಮತ್ತು ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯದ ನೂತನ ಕ್ಯಾಂಪಸ್‌ಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಸುಮಾರು ೪೦ ಎಕರೆ ವಿಸ್ತೀರ್ಣದಲ್ಲಿ, ಸುಮಾರು ೪೦೦ ಕೋಟಿ ರೂ. ವೆಚ್ಚದಲ್ಲಿ ಈ ವಿಶ್ವವಿದ್ಯಾಲಯ ನಿರ್ಮಾಣವಾಗಲಿದೆ. ಇಂದು ನವಾ ರಾಯಪುರದಲ್ಲಿ, ಛತ್ತೀಸ್‌ಗಢ ಹಾಗೂ ನೆರೆಹೊರೆ ರಾಜ್ಯಗಳ ಪೊಲೀಸ್ ಮಹಾನಿರ್ದೇಶಕರೊಂದಿಗೆ ಹಾಗೂ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರೊಂದಿಗೆ ಭದ್ರತಾ ಸಂಬಂಧಿತ ವಿಷಯಗಳ ಕುರಿತು ಸಚಿವ ಅಮಿತ್ ಶಾ ಸಭೆ ನಡೆಸಲಿದ್ದಾರೆ. ಮತ್ತೊಂದು ಸಭೆಯಲ್ಲಿ ಅವರು, ಎಡಪಂಥಿ ಉಗ್ರವಾದ ಕುರಿತ ಭದ್ರತಾ ಸ್ಥಿತಿಗತಿಯನ್ನೂ ಪರಿಶೀಲನೆ ನಡೆಸಲಿದ್ದಾರೆ. ಛತ್ತೀಸ್‌ಗಢ ಪ್ರವಾಸದ ಎರಡನೇ ದಿನವಾದ ನಾಳೆ, ಅವರು ಬಸ್ತರ್ ವಿಭಾಗದ ನಾರಾಯಣಪುರ ಜಿಲ್ಲೆಯ ಅಬುಜ್ಮಾಡ್ ಪ್ರದೇಶಕ್ಕೆ ಭೇಟಿ ನೀಡಲಿದ್ದು, ಸ್ಥಳೀಯ ಗ್ರಾಮಸ್ಥರೊಂದಿಗೆ ಸಂವಾದ ನಡೆಸಲಿದ್ದಾರೆ. ನಾರಾಯಣಪುರ ಜಿಲ್ಲೆಯ ಇರಕ್‌ಭಟ್ಟಿ ಪ್ರದೇಶದಲ್ಲಿರುವ ಗಡಿ ಭದ್ರತಾ ಪಡೆಯ ಶಿಬಿರಕ್ಕೆ ಭೇಟಿ ನೀಡಲಿರುವ ಅವರು, ಅಲ್ಲಿ ನಿಯೋಜಿತ ಯೋಧರೊಂದಿಗೆ ಸಂವಾದ ನಡೆಸಲಿದ್ದಾರೆ.

<><*<><>*><>

ಸಂಘರ್ಷ ಪೀಡಿತ ಇರಾನ್‌ನಿಂದ 'ಆಪರೇಷನ್ ಸಿಂಧು' ಅಡಿಯಲ್ಲಿ ತಮ್ಮ ದೇಶದ ನಾಗರಿಕರನ್ನು ಸ್ಥಳಾಂತರಿಸುವಲ್ಲಿ ಸಹಾಯ ಮಾಡಿದ್ದಕ್ಕಾಗಿ ನೇಪಾಳ ಮತ್ತು ಶ್ರೀಲಂಕಾ - ಭಾರತಕ್ಕೆ ಕೃತಜ್ಞತೆ ಸಲ್ಲಿಸಿವೆ. ನೇಪಾಳದ ವಿದೇಶಾಂಗ ಸಚಿವೆ ಅರ್ಜು ರಾಣಾ ದೇವುಬಾ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಇರಾನ್‌ನಿಂದ ನೇಪಾಳಿ ವಿದ್ಯಾರ್ಥಿಗಳನ್ನು ಸ್ಥಳಾಂತರಿಸುವಲ್ಲಿ ಸಹಾಯ ಮಾಡಿದ್ದಕ್ಕಾಗಿ ವಿದೇಶಾಂಗ

ಸಚಿವ ಡಾ.ಎಸ್. ಜೈಶಂಕರ್ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ನೇಪಾಳಿ ನಾಗರಿಕರ ಸ್ಥಳಾಂತರಿಸುವಿಕೆಯಲ್ಲಿ ಭಾರತದ ಬೆಂಬಲವು ನೇಪಾಳ-ಭಾರತ ಸಂಬಂಧಗಳ ಬಲದ ಪ್ರತಿಬಿಂಬವಾಗಿದೆ ಎಂದು ದೇವುಬಾ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಶ್ರೀಲಂಕಾದ ವಿದೇಶಾಂಗ ಸಚಿವಾಲಯ, ಈ ಒಗ್ಗಟ್ಟಿನ ಕಾರ್ಯಾಚರಣೆ, ಶ್ರೀಲಂಕಾ ಮತ್ತು ಭಾರತದ ನಡುವಿನ ಬಲವಾದ ಮತ್ತು ಶಾಶ್ವತ ಪಾಲುದಾರಿಕೆಯ ಪ್ರತೀಕವಾಗಿದೆ ಹಾಗೂ ದ್ವೀಪ ರಾಷ್ಟ್ರದ ಜನರಿಂದ ಮೆಚ್ಚುಗೆ ಪಡೆದಿದೆ ಎಂದು ತಿಳಿಸಿದೆ. ನೇಪಾಳ ಮತ್ತು ಶ್ರೀಲಂಕಾ ಸರ್ಕಾರಗಳ ಕೋರಿಕೆಯ ಮೇರೆಗೆ ನೇಪಾಳ ಮತ್ತು ಶ್ರೀಲಂಕಾದ ನಾಗರಿಕರನ್ನು ಸ್ಥಳಾಂತರಿಸಲು ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಏತನ್ಮಧ್ಯೆ, ಸಂಘರ್ಷ ಪೀಡಿತ ಇರಾನ್‌ನಲ್ಲಿ ಸಿಲುಕಿದ್ದ ೨೯೦ ಭಾರತೀಯರನ್ನು ಹೊತ್ತ ಮತ್ತೊಂದು ವಿಶೇಷ ವಿಮಾನವು ನಿನ್ನೆ ರಾತ್ರಿ ನವದೆಹಲಿಯಲ್ಲಿ ಸುರಕ್ಷಿತವಾಗಿ ಬಂದಿಳಿದಿದ್ದು, ಆಪರೇಷನ್ ಸಿಂಧು ಅಡಿಯಲ್ಲಿ ಸ್ಥಳಾಂತರಿಸಲಾದ ಒಟ್ಟು ಜನರ ಸಂಖ್ಯೆ ೧ ಸಾವಿರದ ೧೧೭ ಕ್ಕೆ ತಲುಪಿದೆ. ಇರಾನ್‌ನಿಂದ ಸ್ಥಳಾಂತರಿಸಲಾದ ಭಾರತೀಯರ ಐದನೇ ತಂಡ ಇದಾಗಿದೆ.

<><*<><>*><>

ತಮಿಳುನಾಡಿನ ಮಧುರೈನಲ್ಲಿ ಇಂದು ಮುರುಗ ಭಕ್ತ ಸಮ್ಮೇಳನ ನಡೆಯಲಿದೆ. ಪ್ರಪಂಚದಾದ್ಯಂತದ ಮುರುಗನ ಭಕ್ತರನ್ನು ಒಗ್ಗುಡಿಸುವ ಗುರಿಯನ್ನು ಈ ಸಭೆ ಹೊಂದಿದೆ. ಮುರುಗನ ಆರು ವಾಸಸ್ಥಾನಗಳನ್ನು ಹೋಲುವ ಬೃಹತ್ ರಚನಾತ್ಮಕ ಸೆಟ್ ಅನ್ನು ನಿರ್ಮಿಸಲಾಗಿದೆ. ಲಕ್ಷಾಂತರ ಭಕ್ತರು ಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ಕೇಂದ್ರ ಸಚಿವ ಡಾ.ಎಲ್.ಮುರುಗನ್ ಮತ್ತು ಪವನ್ ಕಲ್ಯಾಣ್ ಸೇರಿದಂತೆ ಆಂಧ್ರಪ್ರದೇಶದ ಸಚಿವರು ಮತ್ತು ಮಲೇಷ್ಯಾ, ಶ್ರೀಲಂಕಾ ಸೇರಿದಂತೆ ವಿವಿಧ ದೇಶಗಳ ಗಣ್ಯರು ಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

<><*<><>*><>

ಅಂಡರ್ಸನ್-ಟೆಂಡೂಲ್ಕರ್ ಟ್ರೋಫಿಯ ಮೊದಲ ಪಂದ್ಯದಲ್ಲಿ, ಆತಿಥೇಯ ಇಂಗ್ಲೆಂಡ್ ತೃತೀಯ ದಿನವಾದ ಇಂದು ೨೦೯ ರನ್‌ಗಳಿಗೆ ೩ ವಿಕೆಟ್ ನಷ್ಟಕ್ಕೆ ಮೊದಲ ಇನಿಂಗ್ಸ್ ಮುಂದುವರಿಸಲಿದ್ದು, ಭಾರತದ ೪೭೧ ರನ್‌ಗಳನ್ನು ಬೆನ್ನತ್ತಿ ಆಡಲಿದೆ. ನಿನ್ನೆ ದಿನಾಂತ್ಯದ ವೇಳೆಗೆ, ಒಲಿ ಪೋಪ್ ಶತಕ ಪೂರೈಸಿ ಅಜೇಯರಾಗಿ ಉಳಿದಿದ್ದು, ಹ್ಯಾರಿ ಬ್ರೂಕ್ ಖಾತೆ ತೆರೆಯಬೇಕಿದೆ. ಭಾರತದ ಪರ ಜಸ್‌ಪ್ರೀತ್ ಬೂಮ್ರಾ ಮೂರು ವಿಕೆಟ್ ಪಡೆದಿದ್ದಾರೆ. ಇದಕ್ಕೂ ಮೊದಲು, ಟಾಸ್ ಸೋತು ಬ್ಯಾಟ್ ಮಾಡಿದ ಭಾರತ ತಂಡ, ತನ್ನ ಮೊದಲ ಇನಿಂಗ್ಸ್‌ನಲ್ಲಿ ೪೭೧ ರನ್ ಗಳಿಸಿ, ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಭಾರತ ಪರ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ರಿಷಬ್ ಪಂತ್ ಶತಕ ಗಳಿಸಿ, ಬೃಹತ್ ಮೊತ್ತ ದಾಖಲಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಇಂದು ಇಂಗ್ಲೆಂಡ್ ಬ್ಯಾಟರ್‌ಗಳನ್ನು ಕಡಿವಾಣ ತವಕದಲ್ಲಿ ಭಾರತದ ಬೌಲರ್‌ಗಳು ಕಣಕ್ಕಿಳಿಯಲಿದ್ದಾರೆ. ದಿನದ ಆಟ ಭಾರತೀಯ ಕಾಲಮಾನ ೩.೩೦ ಕ್ಕೆ ಆರಂಭವಾಗಲಿದೆ.

<><*<><>*><>

ಜರ್ಮನಿಯಲ್ಲಿ ನಡೆದ ಐಟಿಎಫ್-ಜೆ೨೦೦ ಗ್ಲ್ಯಾಡ್‌ಬೆಕ್ ಪಂದ್ಯಾವಳಿಯಲ್ಲಿ ಭಾರತದ ಮಾಯಾ ರಾಜೇಶ್ವರನ್ ಮಹಿಳಾ ವೈಯಕ್ತಿಕ ವಿಭಾಗದಲ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ೧೬ ವರ್ಷದ ಮಾಯಾ, ಫೈನಲ್‌ನಲ್ಲಿ ಸ್ವಿಡ್ಜರ್‌ಲ್ಯಾಂಡ್‌ನ ನೊಯೆಲಿಯಾ ಮಾಂಟಾ ಅವರನ್ನು ೬-೨, ೬-೪ ನೇರಸೆಟ್‌ಗಳಿಂದ ಮಣಿಸಿ, ಐಟಿಎಫ್ ಕಿರಿಯರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಇದು ಅವರ ಒಟ್ಟಾರೆ ಏಳನೇ ಐಟಿಎಫ್ ಕಿರಿಯರ ಪ್ರಶಸ್ತಿಯಾಗಿದೆ.

<><*<><>*><>

ಕರಾವಳಿ ಕರ್ನಾಟಕ, ಜಾರ್ಖಂಡ್, ಪಶ್ಚಿಮ ಬಂಗಾಳ, ದೆಹಲಿ ಮತ್ತು ಕೇರಳದಲ್ಲಿ ಇಂದು ಭಾರೀ ಮಳೆಯ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದು ಮಧ್ಯಪ್ರದೇಶ, ಕೊಂಕಣ ಹಾಗೂ ಗೋವಾ, ಮಧ್ಯ ಮಹಾರಾಷ್ಟ್ರ, ಗುಜರಾತ್, ಪೂರ್ವ ರಾಜಸ್ಥಾನ, ದಕ್ಷಿಣ ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ.

<><*<><>*><>

ಏರ್ ಇಂಡಿಯಾದ ಸಿಬ್ಬಂದಿ ವೇಳಾಪಟ್ಟಿ ಮತ್ತು ರೋಸ್ಟರಿಂಗ್‌ಗೆ ಸಂಬಂಧಿಸಿದ ಎಲ್ಲಾ ಕರ್ತವ್ಯ ಮತ್ತು ಜವಾಬ್ದಾರಿಗಳಿಂದ ಮೂವರು ಅಧಿಕಾರಿಗಳನ್ನು ವಜಾಗೊಳಿಸುವಂತೆ ನಾಗರಿಕ ವಿಮಾನಯಾನ ನಿರ್ದೇಶನಾಲಯ-ಡಿಜಿಸಿಎ ಆದೇಶ ಹೊರಡಿಸಿದೆ. ಈ ಅಧಿಕಾರಿಗಳ ವಿರುದ್ಧ ಆಂತರಿಕ ಶಿಸ್ತಿನ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಪ್ರಕ್ರಿಯೆಗಳ ಫಲಿತಾಂಶವನ್ನು ಹತ್ತು ದಿನಗಳಲ್ಲಿ ವರದಿ ಮಾಡುವಂತೆ ವಿಮಾನಯಾನ ಸಂಸ್ಥೆಗೆ ಸೂಚಿಸಲಾಗಿದೆ. ಕಾರ್ಯಾಚರಣೆಯ ಲೋಪಗಳಿಗೆ ಈ ಅಧಿಕಾರಿಗಳು ಜವಾಬ್ದಾರರು ಎಂದು ಡಿಜಿಸಿಎ ಹೇಳಿಕೆಯಲ್ಲಿ ತಿಳಿಸಿದ್ದು, ಅನಧಿಕೃತ ಮತ್ತು ಅನುಸರಣೆಯಿಲ್ಲದ ಸಿಬ್ಬಂದಿ ಜೋಡಣೆ, ಕಡ್ಡಾಯ ಪರವಾನಗಿ ಉಲ್ಲಂಘನೆ ಮತ್ತು ವೇಳಾಪಟ್ಟಿ ಪ್ರೋಟೋಕಾಲ್ ಮತ್ತು ಮೇಲ್ವಿಚಾರಣೆಯಲ್ಲಿ ವ್ಯವಸ್ಥಿತ ವೈಫಲ್ಯಗಳು ಸೇರಿದಂತೆ ಗಂಭೀರ ಮತ್ತು ಪುನರಾವರ್ತಿತ ಲೋಪಗಳಲ್ಲಿ ಈ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂದು ಡಿಜಿಸಿಎ ಹೇಳಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>